ಬೆಂಗಳೂರಿಗೆ ರಜೆಗೆಂದು ಬಂದೆ. ಒಂದು ಕಾಲದಲ್ಲಿ ಪೂರ್ಣಪ್ರಮಾಣದಲ್ಲಿ ಬೆಂಗಳೂರಿಗನೇ ಆಗುವ ಭರವಸೆಯಲ್ಲಿದ್ದ ನಾನು ಅಚಾನಾಕ್ ಊರು-ದೇಶ ಬಿಟ್ಟು ಹೀಗೆ ಪ್ರವಾಸಿಯಂತೆ ಬಂದು ಇದ್ದು ಹೋಗುವುದು ಕಳೆದ ಕೆಲವು ವರ್ಷಗಳಿಂದ ನಡೆದೇ ಇದೆ. ಹಲವರಂತೆ ಬೆಂಗಳೂರು ನನಗೂ ವಿದ್ಯಾಭ್ಯಾಸ, ನೌಕರಿ, ಜಾಗತಿಕ ಬಾಗಿಲು, ಆತ್ಮವಿಶ್ವಾಸ, ಅಳುಕು ಅಂಜಿಕೆಗಳನ್ನು ಕಲಿಸಿ ಮರೆಸಿದ ತಾಣ. ಮತ್ತೆ ಸದ್ಯಕ್ಕೆ ದೂರದೂರದ ಲಂಡನ್ ಹಾಗೂ ಮರವಂತೆಗಳ ನಡುವಿನ ಪ್ರಯಾಣದ ನಡುವಿನ ತಾತ್ಕಾಲಿಕ ತಂಗುದಾಣವಾಗಿಯೂ ಮಾರ್ಪಟ್ಟಿದೆ; ಉದ್ದ ಸಿನಿಮಾದ ನಡುವಿನ ಮಧ್ಯಂತರ ವಿರಾಮದಂತೆ. ಬೆಂಗಳೂರಿನಲ್ಲಿ ಕಳೆಯುವ ಅವಧಿ ಬಹಳ ಕಡಿಮೆ ಆದರೂ ಇಂದಿಗೂ ಅಲ್ಲಿನ ನಸುಕು ಮತ್ತು ನಿಶೆಗಳು ಹಿಂದಿನಂತೆಯೇ ನನ್ನನ್ನು ತುಂಬಿ ಕಾಡುತ್ತವೆ. ಹಕ್ಕಿಗಳ ಚಿಂವ್ ಚಿಂವ್ ನಾದಕ್ಕೆ ಸೂರ್ಯ ಕಣ್ಣುಜ್ಜಿ ಎದ್ದು, ಆಮೇಲೆ ರಸ್ತೆಯನ್ನು ಬಗೆಬಗೆಯ ಸದ್ದುಗಳು ನಿಧಾನಕ್ಕೆ ತುಂಬುವ ಸಮಾಧಾನದ ಹಳ್ಳಿಯಂತೆ ತೋರುವ ಬ್ರಿಸ್ಟಲ್‌ನಿಂದ ಬಂದವನಿಗೆ ಬೆಂಗಳೂರು ಮಹಾಪಟ್ಟಣ ವಾಹನಗಳ ಓಡಾಟದಿಂದಲೇ ದಢಕ್ಕನೆ ಎಚ್ಚರವಾಗುವುದು ಮಲಗುವುದು ಕಾಣಿಸುತ್ತದೆ. ನಸುಕಿನಲ್ಲಿ ನಗರ ಸ್ವಚ್ಛತೆಯ ಹೊಣೆಹೊತ್ತ ವಿನಮ್ರ ಕರ್ಮಚಾರಿಗಳು ಒಂದೊಂದು ಕೈಯಲ್ಲಿ ಒಂದೊಂದು ಪೊರಕೆ ಹಿಡಿದು, ಜೊಂಪಿನಲ್ಲಿ ಮಲಗಿದ ಬೆಂಗಳೂರಿನ ವಿವಿಧ ವಾಸನೆಯ ಬಣ್ಣದ ದೂಳನ್ನು ಬಡಿದು ಎಬ್ಬಿಸಿ ಸರಿಸಿ ಬುಟ್ಟಿಗೆ ತುಂಬುತ್ತಾರೆ. ಇನ್ನು ನಿತ್ಯ ಕಸ ಮಾಡುವ ಜವಾಬ್ದಾರಿಯ ಬೆಂಗಳೂರಿನ ಬಹುತೇಕ ಪುರುಷ-ಸ್ತ್ರೀಯರು ವಿಶ್ವವ್ಯಾಪಿ ಆರೋಗ್ಯ ಚಳವಳಿಯ ಸಕ್ರಿಯ ಭಾಗೀದಾರರಂತೆ ಆಗಲೇ ವೇಗವನ್ನು ಕಂಡುಕೊಂಡು ರಸ್ತೆಯ ಕಾಲುದಾರಿ ಅಲ್ಲದಿದ್ದರೆ ಹತ್ತಿರದ ಪಾರ್ಕಿನ ಪಥದಲ್ಲಿ ಸುತ್ತುಬರುತ್ತಿರುತ್ತಾರೆ. ಹೆಜ್ಜೆ ಗಮನಿಸುವ ವಾಚನ್ನು ಮಣಿಗಂಟಿನ ಹತ್ತಿರ ಬಿಗಿದು ನಾನೂ ಅಂತಹ ಹೆಜ್ಜೆಗಳ ನಡುವಲ್ಲಿ ಲೀನವಾಗುತ್ತೇನೆ. ನಿತ್ಯವೂ ಸಾವಿರ ಕಾಲುಗಳನ್ನು, ಲಕ್ಷ ಹೆಜ್ಜೆಗಳನ್ನು ಆಧರಿಸುವ ಜಯನಗರದ ಸಮೀಪದ ಯಡಿಯೂರು ಸರೋವರ ಪಾರ್ಕಿನ ಕಲ್ಲಿನ ನಡೆಯುವ ಪಥದ ಬದಿಯಲ್ಲಿ ನೆಡಲಾದ ಧ್ವನಿವರ್ಧಕಗಳು ಅವ್ಯಾಹತವಾಗಿ ರಾಜಕುಮಾರ್ ಹಾಡಿದ ಹಳೆಯ ಚಲನಚಿತ್ರಗೀತೆಗಳನ್ನು ಬಿತ್ತರಿಸುತ್ತಿರುತ್ತವೆ. ಭಾರತದ ಹಲವು ಭಾಷೆಗಳು ಸ್ಥಾನ ತಾಣ ಪಡೆದ ಸಮರಸದ ಊರಿನಲ್ಲಿ ಆ ಹೊತ್ತಿಗೆ ಸುತ್ತುವವರೂ ಕನ್ನಡದ ರಾಜಕುಮಾರ ಕುಮಾರಿಯರಾಗಿ ಗತ್ತಿನಲ್ಲಿ ಕೈಬೀಸುತ್ತ ನಡೆಯುತ್ತೇವೆ. ಪ್ರತಿ ಹತ್ತು ಹೆಜ್ಜೆಗೂ ಇರಿಸಲಾದ 'ವಿವೇಕ ವಾಣಿ'ಯ ಫಲಕಗಳಲ್ಲೊಂದರ ಸಾಲು 'ಬಡವನ ನೋವಿಗೆ ಯಾರ ಎದೆ ಕುದಿಯುತ್ತದೆಯೋ ಆತನೇ ಮಹಾತ್ಮನು, ಉಳಿದವರೆಲ್ಲ ದುರಾತ್ಮರು' ಎಂದು ಅಂದು ಅಲ್ಲಿ ಬಂದವರನ್ನು ಎಚ್ಚರಿಸಿ ವಿಂಗಡಿಸಿ ವಿಭಾಗಿಸುವ ವ್ಯರ್ಥ ಶತಪ್ರಯತ್ನದಲ್ಲಿದೆ. 'ರಾಜ್ಯವನ್ನು ಆಳುವವನು, ಪಾದರಕ್ಷೆ ಹೊಲಿಯುವವನು, ವೇದಗಳನ್ನು ಓದುವವನು - ಎಲ್ಲರೂ ಸಮಾನರೇ' ಎಂದು ಇನ್ನೊಂದು ಫಲಕ ಮುಂಜಾವಿನ ಹಿತಕರ ಮಂಪರಿನಲ್ಲಿ ಸಾಮಾಜಿಕ ಸಮಾನತೆಯ ಪಾಠ ಹೇಳುತ್ತದೆ. ಆದರೆ ಅಲ್ಲಿ ನಡೆಯುವ ನಾವು ಅವರು ಇವರು ಎಲ್ಲರೂ ಇಟ್ಟ ಹೆಜ್ಜೆ, ಹಾಕಿದ ಸುತ್ತು, ಏರಿದ ಎದಬಡಿತ ಇವುಗಳ ನಯವಾದ ಲೆಕ್ಕಾಚಾರ, ದೇಹದಲ್ಲಿ ಏರಿದ ಕರಗಿದ ಉಳಿದ ಕೊಬ್ಬುಗಳನ್ನು ಮನಸ್ಸಿನಲ್ಲೇ ತೂಗುತ್ತ ಪಾರ್ಕಿನ ಗೇಟನ್ನು ದಾಟಿ ಗಂಟೆ ನೋಡುತ್ತಾ ದಿನಚರಿಯ ಮುಂದಿನ ಹಂತಕ್ಕೆ ಮರಳುತ್ತಿದ್ದೇವೆ. ರಸ್ತೆಬದಿಯ ಕಾಲುಹಾದಿಗೆ ಪೊರಕೆ ತಾಗಿಸಿ ತಮ್ಮ ತಮ್ಮ ಅಂಗಡಿಗಳ ದೂಳು ಕಸಕ್ಕೆ ನೀರು ಚಿಮುಕಿಸಿ ಅವನ್ನು ಇನ್ನಷ್ಟು ಅಲ್ಲೇ ಮಲಗಿಸಿ ಆಮೇಲೆ ಪಕ್ಕಕ್ಕೆ ಸರಿಸಿ ಕೃತಾರ್ಥರಾಗುತ್ತಿರುವ ವ್ಯಾಪಾರಸ್ಥರನ್ನು ದಾಟುತ್ತ ಮನೆ ತಲುಪುತ್ತಿದ್ದೇವೆ. ಯಡಿಯೂರು ಪಾರ್ಕಿನ ಮೂಲೆಯಲ್ಲಿ ಎತ್ತರದ ಅಡಿಗಟ್ಟಿನ ಮೇಲೆ ನೇರ ಗಂಭೀರ ಅಚಲ ನಿಲುವಿನಲ್ಲಿ ನಿಂತಿರುವ ಬಂಗಾಳದ ವಿವೇಕಾನಂದರು ಬೆಂಗಳೂರಿನ ಹಿಂದಿನ ಅಂದಿನ ಯಾವ ಆಗುಹೋಗುಗಳನ್ನೂ ಗಮನಿಸದೆ ದೂರದಿಗಂತದತ್ತ ನೋಟ ನೆಟ್ಟಿದ್ದಾರೆ. ನಾಳೆಯ ಮುಂಜಾವಿಗೂ ಮುಸ್ಸಂಜೆಗೂ ಪಾರ್ಕಿನ ಫಲಾನುಭವಿಗಳನ್ನು ಅಲ್ಲೇ ಹಾಗೇ ನಿರ್ಲಿಪ್ತ ನಿರ್ವ್ಯಾಜ ಪರಿವ್ರಾಜಕರಾಗಿ ಸಂದರ್ಶಿಸುತ್ತಾರೆ.

ಮೋಡದ ಮರೆಯಲ್ಲಿದ್ದು ಬೆಂಗಳೂರಿನ ಯಾವ ದಿಕ್ಕಿನಿಂದ ಉದಯಿಸಿದ ಎಂದು ಸುಲಭದಲ್ಲಿ ಹೇಳಲು ಬಾರದ ತಾಜಾ ಸ್ಥಳೀಯ ಸೂರ್ಯ ಇನ್ನಷ್ಟು